JULY O1, 2025

AKASHAVANI - DHARWAD

PRADESH SAMACHARA (KANNADA) 7.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಸಮರ್ಪಕ ಅನುಷ್ಟಾನ; ಬಾಗಲಕೋಟೆ ಜಿಲ್ಲಾ ಪಂಚಾಯಿತಿಗೆ, ರಾಜ್ಯ ಸರ್ಕಾರದ, ಪ್ರಶಂಸಾ ಪತ್ರ.

ಪ್ರೇಕ್ಷಕರಲ್ಲಿ ಸದಭಿರುಚಿ ಬೆಳೆಸುವ, ಗುಣಮಟ್ಟದ ಸಿನೆಮಾಗಳು ಇಂದಿನ ಅಗತ್ಯ – ಉಪ ಕುಲಪತಿ ಶರತ್ ಅನಂತಮೂರ್ತಿ.

ಇಂದು, ರಾಷ್ಟ್ರೀಯ ವೈದ್ಯರು ಹಾಗೂ ಲೆಕ್ಕ ಪರಿಶೋಧಕರ ದಿನ: ಮನ್ ಕಿ ಬಾತ್‌ನಲ್ಲಿ, ಉಭಯರ ಕಾರ್ಯವನ್ನು ಶ್ಲಾಘಿಸಿದ, ಪ್ರಧಾನಮಂತ್ರಿ.

ಇಂದು ಪತ್ರಿಕಾ ದಿನಾಚರಣೆ: ಮಾಧ್ಯಮ ಸಂಜೀವಿನಿ ಯೋಜನೆಗೆ, ಮುಖ್ಯಮಂತ್ರಿ ಚಾಲನೆ.

<><><>

ಈಗ ವಾರ್ತೆಗಳ ವಿವರ

<><><>

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಸಮರ್ಪಕ ಅನುಷ್ಟಾನದಲ್ಲಿ, ಗಣನೀಯ ಪ್ರಗತಿ ಸಾಧಿಸಿದ, ಬಾಗಲಕೋಟೆ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಶಶಿಧರ ಕುರೇರ ಅವರಿಗೆ, ರಾಜ್ಯ ಮುಖ್ಯ ಕಾರ್ಯದರ್ಶಿ, ಶಾಲಿನಿ ರಜನೀಶ ಪ್ರಶಂಸಾ ಪತ್ರ ಪ್ರದಾನಿಸಿದ್ದಾರೆ. ಕಳೆದ ಮೇ 14 ರಂದು, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಜರುಗಿದ, ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಅಧಿಕಾರಿಗಳಿಗೆ ಪ್ರಶಂಸಾ ಪತ್ರ ನೀಡುವ ಬಗ್ಗೆ, ತೀರ್ಮಾನವಾಗಿತ್ತು. ಪ್ರಧಾನಮಂತ್ರಿ ರಾಷ್ಟ್ರೀಯ ಕೃಷಿ ಸಿಂಚಾಯಿ ಯೋಜನೆ, ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆ ಸಹಿತ, ಕೇಂದ್ರದ ಹಲವು ಯೋಜನೆಗಳ ಲಾಭ ಫಲಾನುಭವಿಗಳಿಗೆ ಸಕಾಲಿಕವಾಗಿ ತಲುಪುವಂತೆ ಯೋಜಿಸಿದ, ಬದ್ಧತೆ ಪ್ರದರ್ಶಿಸಿದ ಅಧಿಕಾರಿಗಳನ್ನು ರಾಜ್ಯ ಸರ್ಕಾರ ಪುರಸ್ಕರಿಸುತ್ತಿದೆ.

<><><>

ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ– ಕೆಎಂ.ಸಿ. ಆಸ್ಪತ್ರೆಗೆ ಕಂಪೆನಿ ಸಾಮಾಜಿಕ ಹೊಣೆಗಾರಿಕೆ ನಿಧಿ ಅಡಿ, DIGIPLA 90- THERAPEUTIC PLASMA EXCHANGE (TPE) ಯಂತ್ರವನ್ನು, ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಅನಾವರಣಗೊಳಿಸಿದರು. ರಕ್ತದಿಂದ ಪ್ಲಾಸ್ಮಾವನ್ನು ಬೇರ್ಪಡಿಸಿ, ರೋಗಕಾರಕ ವಸ್ತುಗಳನ್ನು ತೆಗೆದುಹಾಕಲು ಮತ್ತು ಆರೋಗ್ಯಕರ ರಕ್ತ ಘಟಕಗಳನ್ನು ರೋಗಿಯ ದೇಹಕ್ಕೆ ಮರಳಿಸಲು ಅನುಕೂಲವಾಗುತ್ತದೆ.

<><><>

ಪೋಡಿಮುಕ್ತ ಗ್ರಾಮ ಅಭಿಯಾನವನ್ನು, ಬೆಳಗಾವಿ ಜಿಲ್ಲೆಯಲ್ಲಿ ಆಂದೋಲನದ ರೀತಿ ಕಂದಾಯ ಇಲಾಖೆ ಆಯೋಜಿಸಿ, ಕಾಲಮಿತಿಯಲ್ಲಿ ಎಲ್ಲ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ನಿರ್ದೇಶಿಸಿದ್ದಾರೆ. ಸುವರ್ಣಸೌಧದಲ್ಲಿ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಅವರು ಮಾತನಾಡಿದರು. ಕಂದಾಯ ಗ್ರಾಮದಡಿ ಹಕ್ಕು ಪತ್ರ ವಿತರಣೆಗೆ, ಮಾರ್ಗಸೂಚಿ ಅನ್ವಯ ಹಕ್ಕು ಪತ್ರಗಳನ್ನು ಅರ್ಹ ಫಲಾನುಭವಿಗಳಿಗೆ, ತ್ವರಿತವಾಗಿ ವಿತರಿಸಿ, ವರದಿ ನೀಡುವಂತೆ ಸಚಿವರು ಸೂಚಿಸಿದರು. ಮಳೆಯಿಂದಾಗಿ ಪ್ರವಾಹಕ್ಕೆ ಈಡಾಗಬಹುದಾದ, ಬೆಳಗಾವಿ ಜಿಲ್ಲೆಯ ಗ್ರಾಮಗಳಲ್ಲಿ ಅಗತ್ಯ ಮುಂಜಾಗ್ರತೆ ಕ್ರಮ ಕೈಗೊಳ್ಳುವಂತೆ, ಸ್ಥಾನಿಕ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು, ಕರ್ತವ್ಯ ನಿರ್ವಹಿಸುವಂತೆ ಸಚಿವರು ಆದೇಶಿಸಿದರು.

<><><>

ಕೊಡಗು ಜಿಲ್ಲೆಯಲ್ಲಿ, ಕಟ್ಟಡ ನಿರ್ಮಾಣ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ಕಾರ್ಮಿಕರು, ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ, ಹೆಸರು ನೋಂದಾಯಿಸಿದ್ದಾರೆ. ಜಿಲ್ಲಾ ಕಾರ್ಮಿಕ ಅಧಿಕಾರಿ ಟಿ.ಕಾವೇರಿ ಮಾಹಿತಿ ನೀಡಿ, ಕಾರ್ಮಿಕ ಕಾಯ್ದೆ ಅಡಿ, ಈ ವರೆಗೆ, 9 ಸಾವಿರದ 971 ಪುರುಷರು ಹಾಗೂ 2 ಸಾವಿರದ 658 ಮಹಿಳಾ ಕಾರ್ಮಿಕರು, ಹೆಸರು ನೋಂದಾಯಿಸಿದ್ದಾಗಿ, ತಿಳಿಸಿದ್ದಾರೆ. ಮೂರು ವರ್ಷಗಳ ಸದಸ್ಯತ್ವದೊಂದಿಗೆ, 60 ವರ್ಷ ಪೂರೈಸಿದ ಕಾರ್ಮಿಕ ಫಲಾನುಭವಿಗಳಿಗೆ, ಪಿಂಚಣಿ ಸೌಲಭ್ಯ ದೊರೆಯಲಿದೆ.

<><><>

ಪ್ರೇಕ್ಷಕರಲ್ಲಿ ಸದಭಿರುಚಿ ಹಾಗೂ ಕಲಾತ್ಮಕತೆಯ ಸ್ವಾದವನ್ನು ಆಸ್ವಾದಿಸುವ, ಅವಕಾಶ ನೀಡಬಲ್ಲ, ಜಾಗತಿಕ ಗುಣಮಟ್ಟದ ಸಿನೆಮಾಗಳು ಇಂದಿಗೆ ಹೆಚ್ಚು ಪ್ರಸ್ತುತ ಎಂದು, ಕುವೆಂಪು ವಿಶ್ವವಿದ್ಯಾಲಯದ ಉಪ ಕುಲಪತಿ ಶರತ್ ಅನಂತಮೂರ್ತಿ ಅಭಿಪ್ರಾಯಪಟ್ಟಿದ್ದಾರೆ. ಶಿವಮೊಗ್ಗ ಶಂಕರಘಟ್ಟದ, ಕುವೆಂಪು ವಿಶ್ವವಿದ್ಯಾಲಯದ ಜ್ಞಾನ ಸಹ್ಯಾದ್ರಿ ಆವರಣದಲ್ಲಿ, ಪತ್ರಿಕೋದ್ಯಮ ಸ್ನಾತಕೋತ್ತರ ಅಧ್ಯಯನ ವಿಭಾಗದಿಂದ, 5 ನೇ ತಾರೀಖಿನ ವರೆಗೆ ಆಯೋಜಿತ, 16ನೇ ವರ್ಷದ ಐದು ದಿನಗಳ, ಸಹ್ಯಾದ್ರಿ ಸಿನೆಮೋತ್ಸವವನ್ನು ಉದ್ಘಾಟಿಸಿ ಅವರು, ಮಾತನಾಡಿದರು. ಪ್ರಸ್ತುತ ಪೂರ್ವ ಏ ್ಯದ ಜಪಾನ್, ಹಾಂಕಾಂಗ್, ಕೊರಿಯಾ ದೇಶಗಳಲ್ಲಿ ಜಗತ್ತಿನ ಅತ್ಯುತ್ತಮ ಚಲನಚಿತ್ರಗಳು ನಿರ್ಮಾಣವಾಗುತ್ತಿವೆ. ಭಾರತೀಯ ಸಿನಿಮಾರಂಗದಲ್ಲಿ ಮಲಯಾಳಂ, ಬೆಂಗಾಲಿ ಚಿತ್ರರಂಗ ಎಲ್ಲ ಆಯಾಮಗಳಲ್ಲಿಯೂ ಉತ್ತಮ ಎಂದು ಪರಿಗಣಿಸಬಹುದಾದ, ಗುಣಮಟ್ಟದ ಚಲನಚಿತ್ರಗಳನ್ನು ನಿರ್ಮಿಸುತ್ತಿವೆ ಎಂದರು.

<><><>

ಈಗ ಪ್ರಕಟಣೆ,

ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಇಂದು ವೈದ್ಯರ ಹಾಗೂ ಲೆಕ್ಕಪರಿಶೋಧಕರ ದಿನ. ಆಕಾಶವಾಣಿ ಜನಪ್ರಿಯ ಮನ್ ಕಿ ಬಾತ್ ಸರಣಿಯ, 123ನೇ ಆವೃತ್ತಿಯಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಬದ್ಧತೆಯಿಂದ ಕರ್ತವ್ಯ ನಿರ್ವಹಿಸುತ್ತಿರುವ, ವೈದ್ಯರು ಹಾಗೂ ಲೆಕ್ಕ ಪರಿಶೋಧಕರ ಸೇವೆಯನ್ನು ಶ್ಲಾಘಿಸಿ, ಅಭಿನಂದಿಸಿದರು.

<><><>

ನರೇಂದ್ರ ಮೋದಿ ಧ್ವನಿ 35 ಸೆಕೆಂದುಗಳು

<><><>

'ತೆರೆಯ ಮರೆಯಲ್ಲಿ ಗುಣಪಡಿಸುವವರನ್ನು, ಗುಣಪಡಿಸುವವರು ಯಾರು?', ಎಂಬ ಧ್ಯೇಯದೊಂದಿಗೆ, ರಾಷ್ಟ್ರೀಯ ವೈದ್ಯರ ದಿನಾಚರಣೆ ಹಿನ್ನೆಲೆ, ಆರೋಗ್ಯ ಕಾಪಾಡುವ ಹೊಣೆಹೊತ್ತ ವೈದ್ಯ ಸಮೂಹವನ್ನು ಗೌರವಿಸುವ ದಿನವಿಂದು. ಪ್ರದೇಶ

ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಧಾರವಾಡದ ಹಿರಿಯ ಆಯುರ್ವೇದ ತಜ್ಞ ವೈದ್ಯೆ ಡಾಕ್ಟರ ಅರುಂಧತಿ ಮೋಹನ.

<><><>

ಡಾ. ಅರುಂಧತಿ ಮೋಹನ ಧ್ವನಿ 68 ಸೆಕೆಂದುಗಳು

<><><>

ಲೆಕ್ಕ ಪರಿಶೋಧಕರ ರಾಷ್ಟ್ರೀಯ ದಿನಾಚರಣೆಯ ಹಿನ್ನೆಲೆ, ಹುಬ್ಬಳ್ಳಿಯ ಚಾರ್ಟೆಡ್ ಅಕೌಂಟೆಂಟ್ ಪ್ರಕಾಶ ಶಿಂಧೆ ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

<><><>

ಸಿ.ಎ. ಪ್ರಕಾಶ ಶಿಂಧೆ ಧ್ವನಿ 38 ಸೆಕೆಂದುಗಳು

<><><>

ಹಿರಿಯ ಗಾಂಧಿವಾದಿ, ಧಾರವಾಡದ ಶ್ರೀಮತಿ ಕುಸುಮಾ ಕೃಷ್ಣ ದೇಶಪಾಂಡೆ, ನಿನ್ನೆ ನಿಧನರಾದರು, ಅವರಿಗೆ 90 ವರ್ಷ ವಯಸ್ಸಾಗಿತ್ತು. ಹಿರಿಯ ಗ್ರಂಥಾಲಯ ವಿಜ್ಞಾನಿ ದಿವಂಗತ ಪ್ರೊಫೆಸರ್ ಕೆ.ಎಸ್.ದೇಶಪಾಂಡೆ ಅವರ ಪತ್ನಿ ಶ್ರೀಮತಿ ಕುಸುಮಾ, ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಹಿನ್ನೆಲೆ ಉಳ್ಳವರು. ಅನೇಕ ಸಾಮಾಜಿಕ ಹಾಗೂ ವಿಧಾಯಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದು, ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಇಂದು ಪತ್ರಿಕಾ ದಿನಾಚರಣೆ. 1843, ಜುಲೈ 1 ರಂದು, ಕನ್ನಡದ ಪ್ರಥಮ ಪತ್ರಿಕೆ, ಮಂಗಳೂರು ಸಮಾಚಾರ ಕಾರ್ಯಾರಂಭಿಸಿತು. ಪತ್ರಿಕಾ ದಿನಾಚರಣೆ ಅಂಗವಾಗಿ, ರಾಜ್ಯಾದ್ಯಂತ ಹಲವು ವಿಶೇಷ ಕಾರ್ಯಕ್ರಮಗಳು ಆಯೋಜಿತವಾಗಿರುವ, ಮುನ್ಸೂದ್ದಿಗಳು ಬಂದಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬೆಂಗಳೂರಿನ, ಇನ್‌ಫಂಟ್ರಿ ರಸ್ತೆಯ, ಸುಲೋಚನಾ ಸಭಾಂಗಣದಲ್ಲಿ, ಇಂದು ಬೆಳಗ್ಗೆ 10.30ಕ್ಕೆ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು, ಉದ್ಘಾಟಿಸಲಿದ್ದಾರೆ. ಹಿರಿಯ ಅಭ್ಯುದಯ ಪತ್ರಕರ್ತ ಪಿ.ಸಾಯಿನಾಥ್ ಅವರು, ವಸ್ತುನಿಷ್ಠ ವರದಿಗಾರಿಕೆಯ ಸಮರ ಸದೃಷ ಸವಾಲು ಎಂಬ ವಿಷಯದ ಕುರಿತು, ಪ್ರಧಾನ ಭಾಷಣ ಮಾಡಲಿದ್ದಾರೆ.

<><><>

ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ ಬೆಂಗಳೂರಿನಲ್ಲಿ ಮಾತನಾಡಿ, ಮುಖ್ಯಮಂತ್ರಿಯವರು, ಪತ್ರಿಕಾ ದಿನಾಚರಣೆ ಹಿನ್ನೆಲೆ, ಇಂದು, ರಾಜ್ಯದ ಪತ್ರಕರ್ತರಿಗೆ 5 ಲಕ್ಷ ರೂಪಾಯಿ ವರೆಗೆ ನಗದು ರಹಿತ, ಉಚಿತ ಆರೋಗ್ಯ ಸೇವೆ ಒದಗಿಸುವ, 'ಮಾಧ್ಯಮ ಸಂಜೀವಿನಿ' ಯೋಜನೆ ಹಾಗೂ ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಸೌಲಭ್ಯ ಯೋಜನೆಗೆ, ಚಾಲನೆ ನೀಡಲಿದ್ದಾರೆ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಸಮರ್ಪಕ ಅನುಷ್ಠಾನ; ಬಾಗಲಕೋಟೆ ಜಿಲ್ಲಾ ಪಂಚಾಯಿತಿಗೆ, ರಾಜ್ಯ ಸರ್ಕಾರದ, ಪ್ರಶಂಸಾ ಪತ್ರ.

ಪ್ರೇಕ್ಷಕರಲ್ಲಿ ಸದಭಿರುಚಿ ಬೆಳೆಸುವ, ಗುಣಮಟ್ಟದ ಸಿನೆಮಾಗಳು ಇಂದಿನ ಅಗತ್ಯ – ಉಪ ಕುಲಪತಿ ಶರತ್ ಅನಂತಮೂರ್ತಿ.

ಇಂದು, ರಾಷ್ಟ್ರೀಯ ವೈದ್ಯರು ಹಾಗೂ ಲೆಕ್ಕ ಪರಿಶೋಧಕರ ದಿನ: ಮನ್ ಕಿ ಬಾತ್‌ನಲ್ಲಿ, ಉಭಯರ ಕಾರ್ಯವನ್ನು ಶ್ಲಾಘಿಸಿದ, ಪ್ರಧಾನಮಂತ್ರಿ.

ಇಂದು ಪತ್ರಿಕಾ ದಿನಾಚರಣೆ: ಮಾಧ್ಯಮ ಸಂಜೀವಿನಿ ಯೋಜನೆಗೆ, ಮುಖ್ಯಮಂತ್ರಿ ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>